# ಸಜ್ಜನರ ಸಂಗ ನಮಗೆಂದಿಗಾಗುವುದೊ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 61.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 545.
3. **Note:** This song is not available in books edited by Sri S.K. Ramachandra Rao and also in the books of Gorebala Hanumantha Rayaru.
4. **Note:** Lyrics given without highlights are as per Ref. 1 and the lyrics given in green highlights are as per Ref. 2.
5. **Note:** Singer has followed lyrics as in Ref. 2 (in green highlights).

ರಾಗ: ಕಾಂಬೋಧಿ ತಾಳ: ಅಟ

ಸಜ್ಜನರ ಸಂಗ ನಮಗೆಂದಿಗಾಗುವುದೊ
ದುರ್ಜನರ ಸಂಗದಲಿ ನೊಂದೆ ಹರಿಯೇ || ಪ ||

ವಾಕು-ವಾಕಿಗೆ ಡೊಂಕನೆಣಿಸುವರು, ಮತ್ತೆ
ಪೋಕರಾಡಿದ ಮಾತು ನಿಜವೆಂಬರು
ವಾಕು-ಶೂಲಗಳಿಂದ ನೆಡುವರು, ಪರರನೀ
ಪೋಕು ಮಾನವರಿಂದ ನೊಂದೆ ಹರಿಯೇ || 1 ||

ತಾವೇ ತಮ್ಮನು ಕೊಂಡಾಡಿಕೊಳ್ಳುವರು
ನ್ಯಾಯವಿಲ್ಲದೆ ನುಡಿವರು ಪರರ
ಭಾವಿಸಲರಿಯರು ಗುರುಹಿರಿಯರ-ನಿಂಥ
ಹೇಯ ಮನುಜರಿಂದ ನೊಂದೆ ಹರಿಯೇ || 2 ||

ಬಡ ಜನರನು ಕೊಂದು ಅಡಗಿಸಿಕೊಂಬರು
ಬಿಡಲೊಲ್ಲರು ಹಿಡಿದನ್ಯಾಯವ

ನುಡಿದು ಕೇಡನು ಒಡನೆ ತಪ್ಪಿಸಿಕೊಂಬಂಥ
ಕಡು ಮೂರ್ಖರಿಂದ ನಾ ನೊಂದೆನು ಹರಿಯೆ || 3 ||

ತೊತ್ತಿನೊಡನೆ ತನ್ನ ಸ್ನೇಹ ಸರಸ ಮಾತು
ತೆತ್ತಿಗರೊಡನೆ ಪಂಥವ ನುಡಿವರು
ಸತ್ತ ಬಳಿಕ ಸೃಷ್ಟಿ ಸಟೆಯೆಂಬರು, ಇಂಥ
ಮತ್ತ ಮನುಜರಿಂದ ನೊಂದೆ ಹರಿಯೇ || 4 ||

ಇಷ್ಟು ದಿನವು ನಿನ್ನ ನೆನೆಯದ ಕಾರಣ
ಕಷ್ಟಪಡುವ ಕೈ ಮೇಲಾಗಿ
ಸೃಷ್ಟಿಗೊಡೆಯ ಶ್ರೀ ಪುರಂದರ ವಿಠಲನೆ
ಮುಟ್ಟಿ ಭಜಿಸಬೇಕು ಧೃಷ್ಟ ಮನವು ನಿನ್ನ || 5 ||

**Note:** Below mentioned lyrics in green highlights are as per Ref. 2.

ರಾಗ: ಸೌರಾಷ್ಟ್ರ ತಾಳ: ಆದಿ

ಸಜ್ಜನರ ಸಂಗ ನಮಗೆಂದಿಗಾಹುದೊ
ದುರ್ಜನರ ಸಂಗದಿಂದ ನೊಂದೆ ಹರಿಯೆ || ಪ ||

ತಾವೆ ತಮ್ಮ ತೂತಿಸಿಕೊಂಬರು
ಹೇವವಿಲ್ಲದೆ ಜರಿವರು ಪರರ
ಭಾವಿಸಲರಿಯರು ಗುರುಹಿರಿಯರ ಇಂಥಾ
ಗಾವಳಿ ಜನರಿಂದ ನೊಂದೆ ಹರಿಯೆ || ೧ ||

ಬಡವರ ಬಡಿದಂಜಿಸಿಕೊಂಬರು
ಕೆಡ ನುಡಿದೊಡನೆ ತಪ್ಪಿಸಿಕೊಂಬರು
ಹಿಡಿದ ಬಳಿಕ ಬಿಡರನ್ಯಾಯವ ಇಂಥಾ
ಕಡು ಕೇಡಿಗರಿಂದ ನೊಂದೆ ಹರಿಯೆ || ೨ ||

ಮುನ್ನ ಮಾಡಿದ ದುಷ್ಕರ್ಮದಿಂದ
ಬೆನ್ನ ಬಿಡದು ದುಷ್ಕರ್ಮದ ದುರ್ಜನರ ಸಂಗ

ಇನ್ನು ನಿನ್ನವರೊಳಗಿಟ್ಟು ಸಲಹೊ ಪ್ರ-
ಸನ್ನ ಪುರಂದರ ವಿಠಲರೇಯ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಭಕ್ತನಿಗೆ ಸತ್ಸಂಗತಿಯ ಅವಶ್ಯಕತೆ ಇದೆ ಎಂಬುದನ್ನು ದಾಸರು ಇಲ್ಲಿ ಸಾರಿದ್ದಾರೆ.

೧. **ವಾಕು-ವಾಕಿಗೆ** = ಮಾತು ಮಾತಿಗೆ
**ಡೊಂಕ** = ತಪ್ಪನ್ನು
**ಪೋಕರು** = ಪೋಲಿಗಳು, ಕೀಳರು

೨. **ನುಡಿ** = ಆಡಿಕೊಳ್ಳು
**ಭಾವಿಸು** = ಆದರಿಸು
**ಹೇಯ** = ಅಸಭ್ಯ

೩. **ಅಡಗಿಸಿಕೊಳ್ಳು** = ಮರೆಮಾಡು

೪. **ತೆತ್ತಿಗ** = ಆಪ್ತ
**ಸಟೆ** = ಸುಳ್ಳು
**ಮತ್ತ** = ಸೊಕ್ಕಿದ

೫. **ಕೈ ಮೇಲಾಗು** = ಮಿತಿಮಿಕ್ಕು
**ಧೃಷ್ಟ** = ಲಜ್ಜೆ ಇಲ್ಲದವ, ಅತಿಶಯ ಸಮರ್ಥ
**ಭೃಷ್ಟ** = ಅಹಂಕಾರಿ

**Classification:** Keerthane
**Ankita:** purandara vittala
**Location:** NA
**Category:** artha bhava, mukti marga, jeevanoddhara
**Sub-Category:** jana, Krishna, manuja, badava, anyaya, murkha, mitra, sullu, bhajane, nachike,
**Pravachana:** NA
**Explanation:** NA